
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

| Rtn. CA Dev Anand<br>District Governor 2024-25 | Rtn. K. Sooryanarayana Udpa<br>President, Mob: 99009 66114 | Rtn. N.G. Usha<br>Secretary, Mob : 81975 92278 | Rtn. M. Madhavachar<br>Bulletin Editor, Mob: 98862 73495 |
|---|---|---|---|

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –14 ದಿನಾಂಕ : 16–10–2024

## ದಿನಾಂಕ: 16.10.2024 ರ ವಾರದ ಸಭೆಯ ವರದಿ

ರೋಟರಿಯ ಇತಿಹಾಸದಲ್ಲೇ ಪ್ರಪ್ರಥಮ ಬಾರಿಗೆ ವರ್ತಕ ವೃಂದದವರ ಸೇವೆಯನ್ನು ಪರಿಗಣಿಸಿ ನಮ್ಮ ಕ್ಲಬ್‌ನ ವರ್ತಕ ಸದಸ್ಯರುಗಳನ್ನು ಆಹ್ವಾನಿಸಿ ವರ್ತಕರುಗಳ ದಿನಾಚರಣೆ (ಟ್ರೇಡರ್ಸ್‌ಡೇ) ಯನ್ನು ಏರ್ಪಡಿಸಲಾಗಿತ್ತು. ಅಂದು ಕ್ಲಬ್‌ನ ಎಲ್ಲಾ ವರ್ತಕ ಸದಸ್ಯರುಗಳಿಗೆ ಸನ್ಮಾನಿಸಲಾಯಿತು. ಅಲ್ಲದೇ ಕೆಲವು ಹಿರಿಯ ವರ್ತಕರು ತಮ್ಮ ವೃತ್ತಿಯಲ್ಲಿನ ಅನುಭವಗಳನ್ನು ಹಂಚಿಕೊಳ್ಳುವುದರ ಮೂಲಕ ವರ್ತಕರ ದಿನಾಚರಣೆ ಅತ್ಯಂತ ಯಶಸ್ವಿಯಾಗಿ ನಡೆಯಿತು. ಅಲ್ಲದೇ ರೋಟರಿ ಸದಸ್ಯರ ಕಾರ್ಯಕ್ಷೇತ್ರದಲ್ಲಿ ಸಭೆ ಎಂಬ ನಿಯಮದನ್ವಯ ನಮ್ಮ ಕ್ಲಬ್‌ನ ಸದಸ್ಯರಾದ ರೊ.ಎನ್. ಗೋಪಿನಾಥ ಮತ್ತು ರೊ.ಡಾ. ಬಿ.ವಿ. ಲಕ್ಷ್ಮೀದೇವಿಯವರ ಕಾರ್ಯಕ್ಷೇತ್ರ ಹೊಟೆಲ್ ಮಥುರಾ ಪ್ಯಾರಡೈಸ್‌ನಲ್ಲಿ ಸಂಜೆ 6.45ಕ್ಕೆ ನಡೆದ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಮಥುರಾ ಪ್ಯಾರಡೈಸ್‌ನ ಮಾಲೀಕರು, ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಮಾಜಿ ಅಧ್ಯಕ್ಷರು, ರೋಟರಿ ಕ್ಲಬ್‌ನ ಉಪಾಧ್ಯಕ್ಷರೂ ಆಗಿದ್ದಂತಹ ರೊ. ಎನ್. ಗೋಪಿನಾಥರವರು ವೇದಿಕೆಯಲ್ಲಿದ್ದರು. ಅಧ್ಯಕ್ಷತೆ ವಹಿಸಿದ್ದ ಕ್ಲಬ್‌ನ ಅಧ್ಯಕ್ಷರಾದ ರೊ.ಕೆ. ಸೂರ್ಯ ನಾರಾಯಣ ಉಡುಪರು ಮತ್ತು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದು ಸಭೆಯ ಕಲಾಪವನ್ನು ಯಶಸ್ವಿಗೊಳಿಸಿಕೊಟ್ಟರು.







ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಕಿಶೋರ್ ಶೀರನಾಳಿಯವರು "ಶ್ರೀಗಂಧ ನಾನಾಗಿ ಹುಟ್ಟುತಿದ್ದರೆ ಆಗ ನಿನ್ನ ಪಾದಾರ್ಚನೆಗೆ ಸವೆಯುತ್ತಿದ್ದೆ" ಎಂಬ ಗೀತೆಯನ್ನು ಹಾಡಿ ಪ್ರಾರ್ಥಿಸಿದರು.

ಖ್ಯಾತ ಉದ್ಯಮಿ, ದೇಶಪ್ರೇಮಿ, ಶ್ರೀ ರತನ್‌ಟಾಟಾರವರು ಮತ್ತು ನಮ್ಮ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಬಿ.ಕೆ. ಗೋವಿಂದರಾಜ್‌ರವರ ಧರ್ಮಪತ್ನಿ ಶ್ರೀಮತಿ ಸುಜಾತ ಗೋವಿಂದರಾಜುರವರು ನಿಧನರಾಗಿದ್ದು, ಮೃತರ ಆತ್ಮಕ್ಕೆ ಶಾಂತಿಕೋರಿ ಒಂದು ನಿಮಿಷದ ಮೌನವಾಚರಿಸಲಾಯಿತು.

ರೊ.ವೀರಣ್ಣ ಎ. ಹುಗ್ಗಿಯವರು ಸ್ವಾಗತ ಹಾಗೂ ಪ್ರಸ್ತಾವನೆಯನ್ನು ಮಾಡಿದರು. ಸಮುದಾಯದ ಏಳಿಗೆಗೆ ಮತ್ತು ಆರ್ಥಿಕತೆಯ ಪ್ರಗತಿಗಾಗಿ ಪರೋಕ್ಷವಾಗಿ ಸಹರಿಸುತ್ತಿರುವ ವಣಿಕ ವೃಂದಕ್ಕೆ ಅಭಿನಂದನೆಯನ್ನು ಸಲ್ಲಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆಗಳನ್ನು ನೀಡಿದರು. ರೊ. ಎಂ.ಭಾರ್ಗವಿ ಭಟ್‌ರವರನ್ನು ವೇದಿಕೆಗೆ ಆಹ್ವಾನಿಸಿ, ಹುಟ್ಟು ಹಬ್ಬದ ಶುಭಾಶಯ ಕೋರಲಾಯಿತು. ರೊ. ಬಿ.ಎನ್. ವಿಶ್ವೇಂದ್ರ ಮತ್ತು ರೊ.ಎ. ಮಂಜುನಾಥರವರಿಗೆ ಕೊಡಮಾಡಬೇಕಿದ್ದ ನೆನಪಿನ ಕಾಣಿಕೆಗಳನ್ನು ನೀಡಲಾಯಿತು. ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ

2ನೇ ಪುಟಕ್ಕೆ

## ಈ ವಾರದ ಸಭೆ

**ದಿನಾಂಕ : 23–10–2024 ಬುಧವಾರ** **ಸಂಜೆ 6:30**

**Chief Guest : Dr. Nagendra,** M.D., Maax Hospital

**Topic: Healthy Behaviour for A Healthy Heart**

### Guest Lecture by:

**Dr. Manjunath A.P.,** Chief Cardielogist, Maax Hospital
**Dr. Sudheer M. Bhat,** CVT Surgeon, Maax Hospital
**Dr. Shivakumar M.C.,** Anaesthetist, Maax Hopital

**Venue:**
**MAAX SUPER SPECIALITY HOSPITAL**

ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ








ಶ್ರೀಧರ್‌ರವರು ಹಲವಾರು ವಿಶೇಷಣಗಳೊಂದಿಗೆ ಮುಖ್ಯ ಅತಿಥಿ ರೊ.ಎನ್. ಗೋಪಿನಾಥರವರ ಪರಿಚಯ ಮಾಡಿಕೊಟ್ಟರು.

ಇದೇ ಸಂದರ್ಭದಲ್ಲಿ ನೂತನ ಸದಸ್ಯರಾಗಿ ಶ್ರೀಮತಿ ಹೇಮಾವತಿ ಮಂಜುನಾಥರವರು ನಮ್ಮ ಕ್ಲಬ್‌ನ ಸದಸ್ಯರಾಗಿ ಸೇರ್ಪಡೆಗೊಂಡರು. ಇವರ ಪರಿಚಯವನ್ನು ರೊ.ಎನ್.ಜಿ.ಉಷಾರವರು ನಡೆಸಿಕೊಟ್ಟರು. ಮಾಜಿ ಸಹಾಯಕ ಗವರ್ನರ್ ರೊ.ಸುನೀತಾ ಶ್ರೀಧರ್‌ರವರು ಇವರನ್ನು ರೋಟರಿ ಪಿನ್ ಮತ್ತು ರೋಟರಿಯ ಸಾಹಿತ್ಯವನ್ನು ನೀಡುವ ಮೂಲಕ ರೋಟರಿಗೆ ಬರಮಾಡಿ ಕೊಂಡರು.

ಈ ಸಭೆಯಲ್ಲಿ ಹಿರಿಯ ವರ್ತಕರುಗಳಾದ ನಮ್ಮ ಕೆಲ ಸದಸ್ಯರುಗಳು ತಮ್ಮ ಅನುಭವವನ್ನು ಹಂಚಿಕೊಂಡರು. ವಿವರ ಇಂತಿದೆ.

ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ವರ್ತಕರಾದ ರೊ.ಡಿ.ಎಸ್. ನಟರಾಜ್‌ರವರು ಮಾತನಾಡಿ, ಕೂಡು ಕುಟುಂಬದಲ್ಲಿದ್ದ ನಮ್ಮ ವಹಿವಾಟನ್ನು 1963 ರಲ್ಲಿ ಪ್ರತ್ಯೇಕವಾಗಿ ನಗರದಲ್ಲಿ ಶೋಭಾ ಸ್ಟೋರ್ಸ್ ಪ್ರಾರಂಭಿಸಿ ಈವರೆವಿಗೂ ಯಶಸ್ವಿಯಾಗಿ ನಡೆಸಿಕೊಂಡು ಬಂದಿರುತ್ತೇನೆ. ಸುಮಾರು 40 ವರ್ಷಗಳಿಂದ ನಮ್ಮ ಕುಟುಂಬ ವ್ಯಾಪಾರದಲ್ಲಿ ತೊಡಗಿಕೊಂಡಿದೆ. ಈಗಲೂ ನಮ್ಮ ವ್ಯವಹಾರ ಚೆನ್ನಾಗಿರುವುದರಿಂದಲೇ ನಾವು ರೋಟರಿ ಸದಸ್ಯರಾಗಿ ಮುಂದುವರೆದಿದ್ದೇನೆ. ಹಲವಾರು ಸಣ್ಣ ಪುಟ್ಟ ಅಗತ್ಯ ವಸ್ತುಗಳನ್ನೂ ಸಹ ಮಾರಾಟ ಮಾಡುತ್ತಿರುವುದರಿಂದ ಅಂಥಹ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕದಿದ್ದಾಗ ನಮ್ಮ ಅಂಗಡಿಗೆ ಗ್ರಾಹಕರುಗಳನ್ನು ಮಾರ್ಗದರ್ಶಿಸುತ್ತಿರುವುದು ನಮ್ಮ ಗುಡ್‌ವಿಲ್ ಆಗಿದೆ ಎಂದರು.


ಕ್ಲಬ್‌ನ ಮಾಜಿ ಅಧ್ಯಕ್ಷರೂ ಹಾಗೂ ವರ್ತಕರಾದ ರೊ.ಟಿ.ಆರ್. ಅಶ್ವಥ ನಾರಾಯಣರವರು ಮಾತನಾಡಿ, ವರ್ತಕರ ದಿನಾಚರಣೆ ಬಗ್ಗೆ ಸಂತಸ ವ್ಯಕ್ತಪಡಿಸಿ, ಸರ್ಕಾರಕ್ಕೆ ನಾವುಗಳು ಪ್ರಾಮಾಣಿಕವಾಗಿ ತೆರಿಗೆಯನ್ನು ಸಲ್ಲಿಸುತ್ತಿದ್ದು, ಪರೋಕ್ಷವಾಗಿ ಸಮಾಜದ ಬೆಳವಣಿಗೆಯಲ್ಲಿ ನಮ್ಮ ಪಾತ್ರವಿದೆ ಎಂದರು. ನಮ್ಮ ಜೀವನದಲ್ಲಿ ನಾವು ಮೂರು ನಮೂನೆಯ ವ್ಯವಹಾರವನ್ನು ಮಾಡಿದ್ದೇವೆ. ಲಾರಿಗಟ್ಟಲೇ ಸರಕು ಸಾಮಾಗ್ರಿಗಳನ್ನು ಮಲೆನಾಡಿನ ಹೆಬ್ಬಾಗಿಲಾದ ಶಿವಮೊಗ್ಗದ ಹಳ್ಳಿ ಹಳ್ಳಿಗಳಿಗೆ ಪೂರೈಸಿದ್ದೇವೆ. ಈ ಹಿಂದೆ ತಿಂಗಳಾನುಗಟ್ಟಲೇ ಮಳೆಗಾಲವಿದ್ದಿತ್ತು. ಆಗ ಸಂಚಾರ ವಿರಳವಾಗಿದ್ದು ಹಳ್ಳಿಗರು ಮನೆಯಿಂದ ಹೊರಗೇ ಬರುತ್ತಿರಲಿಲ್ಲ. ಅವರೆಲ್ಲ ವರ್ಷಕ್ಕಾಗುವಷ್ಟು ಅಥವಾ ಹಲವಾರು ತಿಂಗಳಿಗಾಗುವಷ್ಟು ನಿತ್ಯೋಪಯೋಗಿ ವಸ್ತುಗಳನ್ನು ಸಂಗ್ರಹಿಸುತ್ತಿದ್ದರು. ಈಗ ಮೊಬೈಲ್ ಮೂಲಕ ಸೇವೆ ದೊರಕುತ್ತಿದ್ದರೂ, ಆಗ ಟೆಲಿಗ್ರಾಂ ಆದೇಶದ ಮೇರೆಗೂ ಸರಕುಗಳು ಗ್ರಾಹಕರನ್ನು ತಲುಪುತ್ತಿದ್ದವು. ಬಾಲ್ಯದಲ್ಲೇ ತಮ್ಮ ತಂದೆಯವರನ್ನು ಕಳೆದುಕೊಂಡ ನಮ್ಮನ್ನು ನಮ್ಮ ದೊಡ್ಡಪ್ಪನವರು ಚೆನ್ನಾಗಿ ನೋಡಿಕೊಂಡು ವ್ಯವಹಾರವನ್ನು ಒದಗಿಸಿಕೊಟ್ಟರು. ನಾವುಗಳು ಸುಮಾರು 40 ವರ್ಷದಿಂದ ದೇಶಕ್ಕೆ, ಸಾರ್ವಜನಿಕರಿಗೆ ಅಮೂಲ್ಯವಾದ ಸೇವೆ ಸಲ್ಲಿಸುತ್ತಾ ಬಂದಿದ್ದೇವೆ ಎಂದರು.

ರೊ. ಡಿ.ಪಿ. ಮೋಹನ್‌ರವರು ಮಾತನಾಡಿ, ನಾವು ನಮ್ಮ ಕಾರ್ಯ ಕ್ಷೇತ್ರದಲ್ಲಿ ಹುಲಿ. ಆದರೆ ಇಲ್ಲಿ ಹಿರಿಯ ವರ್ತಕರುಗಳು ಹಾಗೂ ಹಿರಿಯ ಸದಸ್ಯರ ಮುಂದೆ ಇಲಿ. ಸುಮಾರು 55 ವರ್ಷಗಳಿಂದ ನಮ್ಮ ಅಂಗಡಿ ಯಲ್ಲಿಯೇ ಕಳೆದಿದ್ದೇನೆ. ಸುಖವಾಗಿ ವ್ಯಾಪಾರ ಮಾಡಿದ್ದೇವೆ. ಗ್ರಾಹಕರಿಗೆ ನಮ್ಮ ಉತ್ತಮವಾದ ಸೇವೆಯನ್ನು ನೀಡುತ್ತಿದ್ದರೂ, ಈಗ ವ್ಯಾಪಾರದ ಸ್ವರೂಪವೇ ಬದಲಾಗಿದೆ. ಈಗೆಲ್ಲಾ ಆನ್‌ಲೈನ್‌ನಲ್ಲಿ ವ್ಯವಹಾರವಾಗುತ್ತಿದೆ. ಇಲ್ಲಿ ಗ್ರಾಹಕರ ಸಂತೃಪ್ತಿ ಮುಖ್ಯವಾಗಿದ್ದು ಗ್ರಾಹಕರಿಗೆ ಅಗತ್ಯವಿರುವ ವಸ್ತುಗಳನ್ನು ನಾವು ದೊರಕಿಸಿಕೊಡಬೇಕಾಗಿರುತ್ತದೆ. ಇಂದಿನ ವ್ಯವಹಾರಕ್ಕೆ ನಾವು ಅಪ್‌ಗ್ರೇಡ್ ಆಗಬೇಕು. ಅಪ್ಪ ಹಾಕಿದ ಆಲದ ಮರವನ್ನು ಅನುಸರಿಸಲಾಗದು ಎಂದರು.

ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ. ಹೆಚ್. ಎಸ್. ಮೋಹನ್‌ರವರು ಮಾತನಾಡಿ, ಮೂಲತ: ತಮ್ಮದು ಕಂಪ್ಯೂಟರ್ ಉದ್ಯಮವಾಗಿದ್ದು ಆರಂಭದಲ್ಲಿ ಕಂಪ್ಯೂಟರ್‌ಗಳು ರೂ. 1.50 ಲಕ್ಷವಿದ್ದಿತ್ತು. ಈಗ 30,000.00 ಕ್ಕೆ ದೊರಕುತ್ತಿದೆ. ನಮ್ಮ ಉದ್ಯಮ ಬಹಳ ಚೆನ್ನಾಗಿ ನಡೆಯಿತು. ಆನ್‌ಲೈನ್ ವ್ಯವಹಾರಗಳು ಬಂದ ಮೇಲೆ ನಮ್ಮ ಉದ್ಯಮಗಳು ಬಡವಾಗುತ್ತಿದೆ. ಜೊತೆಗೆ ಹೊಸ ಹೊಸ ಅವಕಾಶಗಳು ಲಭ್ಯವಾಗುತ್ತಿವೆ. ಹಾಗಾಗಿ ಒಂದೇ ಉದ್ಯಮ ಬೇಡ. ಬೇರೆ ಬೇರೆ ಉದ್ಯಮಗಳತ್ತ ಬದಲಾಗಬೇಕಾಗಿದೆ. ಈಗ ನಾವು ಸೋಲಾರ್ ರೂಫ್‌ಟಾಪ್ ವ್ಯವಹಾರದಲ್ಲಿ ತೊಡಗಿಕೊಂಡಿದ್ದೇವೆ. ನಾನು ಈಗಿನ ಉದ್ಯಮಿಗಳಿಗೆ ವೆಬ್ ಸ್ಟೋರ್ ಮಾಡಿಕೊಳ್ಳಿ ಅದರಿಂದ ಗ್ರಾಹಕರಿಗೆ ನಿಮಗೆ ಇಬ್ಬರಿಗೂ ಅನುಕೂಲ ಎಂದರು. ಆನ್‌ಲೈನ್ ಮಾರಾಟ ಮಾಡುವವರು ಜಿಲ್ಲಾ ಮಟ್ಟದಲ್ಲಿಯ ವ್ಯವಹಾರಕ್ಕೂ ಚಿಂತನೆ ಮಾಡಬಹುದು ಎಂದರು.

ಕಾರ್ಯಕ್ರಮ ಸಮಿತಿ ಚೇರ್ಮನ್ ರೊ. ಎನ್.ವಿ.ಭಟ್‌ರವರು ಅಂದು ಆಗಮಿಸಿದ್ದ ರೋಟರಿ ವರ್ತಕ ಸದಸ್ಯ ಮಿತ್ರರನ್ನು ವೇದಿಕೆಗೆ ಆಹ್ವಾನಿಸಿದರು. ರೊ. ಟಿ.ಆರ್. ಅಶ್ವಥನಾರಾಯಣ, ರೊ. ದೀಪಕ್ ಕೋರಿ,.ರೊ. ಡಿ.ಎಸ್. ನಟರಾಜ್, ರೊ.ಎಂ. ಮಾಧವಾಚಾರ್, ರೊ.ಡಿ.ಎಲ್. ಮಂಜುನಾಥ್, ರೊ.ಬಿ.ಎನ್. ವಿಶ್ವೇಂದ್ರ ರೊ.ಡಿ.ಪಿ.ಮೋಹನ್, ರೊ. ಎಂ.ವಿ. ನಾಗೇಶ್, ಇವರುಗಳನ್ನು ಮಾಜಿ ಸಹಾಯಕ ಗವರ್ನರ್ ರೊ. ಎನ್. ಎಸ್.ಶ್ರೀಧರ್, ರೊ.ಡಾ. ಹೆಚ್.ಪಿ.ಸಿ. ಶಿವಕುಮಾರ್ ರೊ.ವೀರಣ್ಣ ಎ. ಹುಗ್ಗಿ, ರೊ.ಭಾರ್ಗವಿ ಭಟ್, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸೇರಿ ಸನ್ಮಾನಿಸಿದರು.

ಮಾಜಿ ಸಹಾಯಕ ಗವರ್ನರ್ ರೊ.ಎಸ್. ದತ್ತಾತ್ರಿ, ರೊ. ಹೆಚ್.ಎಸ್. ಮೋಹನ್, ರೊ. ರಾಕೇಶ್‌ಗೌಡ, ರೊ. ಗಣೇಶ್, ರೊ. ಮರಿ ಜೋಸೆಫ್ ಇವರುಗಳನ್ನು ರೊ. ಎಸ್. ಜಿ. ಗೋಪಾಲ್, ರೊ. ಸುನೀತಾ ಶ್ರೀಧರ್, ರೊ.ಎನ್.ವಿ.ಭಟ್, ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಸೇರಿ ಸನ್ಮಾನಿಸಿದರು.



ಅಂದಿನ ಮುಖ್ಯ ಅತಿಥಿಗಳಾದ ರೊ.ಎನ್. ಗೋಪಿನಾಥ್‌ರವರು ಮಾತನಾಡಿ, ಇಂದು ನಮ್ಮ ರೋಟರಿ ಕ್ಲಬ್‌ನಿಂದ ವರ್ತಕರ ದಿನವನ್ನಾಗಿ

ಆಚರಿಸುತ್ತಿರುವುದಕ್ಕೆ ಅಭಿನಂದನೆ ಸಲ್ಲಿಸುತ್ತೇನೆ. ಹಲವಾರು ವಸ್ತುಗಳನ್ನು ಮಾರಾಟ ಮಾಡುತ್ತಾ ಬೇರೆ ಬೇರೆ ಉದ್ಯಮಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾ ಆರ್ಥಿಕ ಶಕ್ತಿಯಾಗಿ ಬೆಳೆದಿರುವವರೆ ವರ್ತಕರು. ಈಗ ಶಿವಮೊಗ್ಗ ಒಂದು ಆರ್ಥಿಕ ಶಕ್ತಿಯಾಗಿ ಬೆಳೆಯುತ್ತಿದೆ. ವ್ಯವಸಾಯವೂ ಕೂಡ ಇದರ ಭಾಗವಾಗಿದೆ. ಶಿವಮೊಗ್ಗ ಈಗ ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಬೆಳೆಯುತ್ತಿದ್ದು, ಈ ಭಾಗ ಕಮರ್ಷಿಯಲ್ ಹಬ್ ಆಗಬೇಕಿದ್ದು, ವರ್ತಕರು ಈ ಬಗ್ಗೆ ಗಮನಹರಿಸಬೇಕಾಗಿದೆ ಎಂದರು. ಉದ್ಯೋಗಿಗಳ ಜೀವನಮಟ್ಟ ಸುಧಾರಿಸಿದೆ. ವರ್ತಕ ಸಮುದಾಯದಿಂದ ಸಾಂಸ್ಕೃತಿಕ ಕ್ಷೇತ್ರಗಳಿಗೆ ದೇಣಿಗೆ ನೀಡುವುದರ ಮೂಲಕ ಆ ಕ್ಷೇತ್ರವೂ ಬೆಳೆಯುತ್ತಿದೆ. ಈ ಹಿಂದೆ ನಮ್ಮಗಳ ಉದ್ಯಮದಲ್ಲಿ ಆದರ್ಶ ಇತ್ತು, ಮೌಖಿಕವಾದ (ಫೇಸ್‌ಟು ಫೇಸ್) ವ್ಯವಹಾರವಿತ್ತು. ನೀತಿ ಇತ್ತು. ಇಂದು ಸಾವಿರಾರು ಜನರು ವ್ಯವಹಾರಗಳಲ್ಲಿ ತೊಡಗಿಕೊಂಡಿದ್ದಾರೆ. ಇದಕ್ಕೆ ಅವಕಾಶಗಳೂ ಲಭ್ಯವಾಗಿದೆ. ತಂತ್ರಜ್ಞಾನ ಬದಲಾದ ಹಾಗೆ ನಮ್ಮ ಜೀವನ ವಿಧಾನವೂ ಬದಲಾವಣೆಯಾಗಿದೆ. ಅಂಗಡಿಗಳಿಗೆ ಹೋಗಿ ಖರೀದಿಸುವ ವ್ಯವಧಾನವಿಲ್ಲ ಎಂದರು.





ರೋಟರಿಯ ವರ್ತಕರು ಮಾಡಿದ ಸಾಧನೆಗಳನ್ನು ಗುರುತಿಸುವಂಥಹ ಕೆಲಸ ರೋಟರಿ ಕ್ಲಬ್ ಶಿವಮೊಗ್ಗ ಮಾಡುತ್ತಿದೆ. ತಂತ್ರಜ್ಞಾನವನ್ನು ಬಳಸಿಕೊಂಡು ನಮ್ಮ ಉದ್ಯಮವನ್ನು ಯಶಸ್ವಿಗೊಳಿಸಿಕೊಳ್ಳಲು ರೋಟರಿ ಚಾರಿಟಬಲ್ ಎಂಬ ಸ್ವಂತ ಸಮಾಜ ನಿರ್ಮಾಣ ಮಾಡಬೇಕು. ಈಗ ರೋಟರಿಯ ಆರ್.ಎಂ.ಬಿ.ಯಿಂದ ಈ ಕೆಲಸವಾಗುತ್ತಿದೆ ಎಂದರು. ಎಲ್ಲಾ ಸೆಕ್ಟರುಗಳಲ್ಲೂ ನಾಯಕರಿರುತ್ತಾರೆ. ಅವರುಗಳು ಇವೆಲ್ಲ ಉದ್ಯಮಗಳನ್ನು ಜಿಲ್ಲಾ ಮಟ್ಟಕ್ಕೆ ಕೊಂಡೊಯ್ಯಬೇಕು ಎಂದು ತಿಳಿಸಿ ತಮಗೆ ಅವಕಾಶ ನೀಡಿದ್ದಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ರಸಗೊಬ್ಬರ ಮಾರಾಟದ ಸಮೂಹದಿಂದ ರೊ. ರಾಕೇಶ್ ಗೌಡರವರು ರೊ. ಎನ್. ಗೋಪಿನಾಥ್ ರವರನ್ನು ಅಭಿನಂದಿಸಿದರು. ರೋಟರಿಯಿಂದ ರೊ. ಡಿ.ಎಲ್. ಮಂಜುನಾಥ್, ರೊ. ಕಿಶೋರ್ ಶೀರನಾಳಿ, ಶಾಲು ಹೊದಿಸಿ ಮಾಲೆ ಹಾಕಿದರು. ರೊ. ಸುನೀತಾ ಶ್ರೀಧರ್ ನೆನಪಿನ ಕಾಣಿಕೆ ನೀಡಿ ಅಭಿನಂದಿಸಿದರು.

ಇದೇ ಸಂದರ್ಭದಲ್ಲಿ ಕ್ಲಬ್‌ನ ಮಾಜಿ ಅಧ್ಯಕ್ಷರಾದ ರೊ.ಡಿ.ಎಲ್. ಮಂಜುನಾಥರವರು ಮಾತನಾಡಿ, ಇಂದಿನ ಆಚರಣೆಗೆ ವರ್ತಕರ ಸಮೂಹದ ಪರವಾಗಿ ಧನ್ಯವಾದಗಳನ್ನು ತಿಳಿಸುತ್ತಾ, ತಾವು 30 ವರ್ಷಗಳಿಂದ ಟಾಟಾ ಸಮೂಹದ ಸ್ಟೀಲ್ ಉಪಕರಣಗಳನ್ನು ಸುಮಾರು 9 ಜಿಲ್ಲೆಗಳಿಗೆ ಪೂರೈಸುತ್ತಿದ್ದು, ಟಾಟಾ ಸಮೂಹದ ಅಪ್‌ಗ್ರೇಡ್ ಜೊತೆಗೆ ನಾವುಗಳೂ ಸಹ ಅಪ್‌ಗ್ರೇಡ್ ಆಗಿದ್ದು, ಚೈತನ್ಯ ಮತ್ತು ಬುದ್ಧಿವಂತಿಕೆಯನ್ನು ಸರಿಯಾದ ಸಮಯದಲ್ಲಿ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂದರು. ಟಾಟಾ ಸ್ಟೀಲ್‌ನವರ ಉದ್ಯಮದ ನಿಷ್ಠೆ ಹಾಗೂ ಅವರ ಕಾರ್ಯತತ್ಪರತೆ ಬಗ್ಗೆ ಮಾತನಾಡಿದ ರೊ.ಡಿ.ಎಲ್. ಮಂಜುನಾಥರವರು, ಅವರು ವ್ಯವಹಾರಗಳು ಗೌರವಾನ್ವಿತವಾಗಿರಬೇಕು ಎಂದು ಬಯಸುವವರಾಗಿದ್ದು ಉತ್ತಮ ಗುಣಮಟ್ಟದ ಉತ್ಪನ್ನಗಳನ್ನೆ ಮಾರಬೇಕೆಂಬುದಾಗಿದೆ. ಸದಾಕಾಲ ಆ ಉತ್ಪನ್ನ ಅಥವಾ ಪದಾರ್ಥಗಳು ವರ್ತಕರಲ್ಲಿರಬೇಕೆಂಬುದು ಅವರ ನಿಯಮಗಳಲ್ಲೊಂದಾಗಿದೆ. ನಮ್ಮ ವ್ಯವಹಾರದಲ್ಲಿ ಎಥಿಕಲ್ ಪ್ರಾಕ್ಟೀಸ್ ಹಾಗೂ ಸರಿಯಾದ ಉತ್ಪನ್ನಗಳನ್ನು ಕೊಡುವ ಜವಾಬ್ದಾರಿ ನಮ್ಮದಾಗಿರಬೇಕೆಂಬುದು ಮತ್ತು ಗ್ರಾಹಕನಿಗೆ ಅದರಿಂದ ಆಗುವ ಉಪಯೋಗದ ಬಗ್ಗೆಯು ನಮಗೆ ಅರಿವಿರಬೇಕೆಂಬುದು ಅವರ ಧ್ಯೇಯವಾಗಿತ್ತು ಎಂದರು. ಟಾಟಾ ಸ್ಟೀಲ್‌ನವರ ಅತ್ಯುತ್ತಮವಾದ ಮಿಷನರಿಯಿಂದಲೆ ಆ ಉದ್ಯಮ ಈ ಮಟ್ಟಿಗೆ ಬೆಳೆದಿದೆ ಎಂದರು.

ಅಧ್ಯಕ್ಷರಾದ ರೊ. ಕೆ.ಸೂರ್ಯನಾರಾಯಣ ಉಡುಪರು ಮಾತನಾಡಿ, ಇಂದು ಈ ವರ್ತಕರ ದಿನಾಚರಣೆ ಚೆನ್ನಾಗಿ ನಡೆಯಿತು ಸಹರಿಸಿದ ಸರ್ವರಿಗೂ ತಮ್ಮ ಕೃತಜ್ಞತೆ ವ್ಯಕ್ತಪಡಿಸಿದರು. ಕೊನೆಯಲಿ ಸಹ ಕಾರ್ಯದರ್ಶಿ ರೊ. ಸಿ. ವಿಜಯ ಕುಮಾರ್‌ರವರಿಂದ ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

## VALUABLE INSIGHT ON SOCIAL SERVICE



The Bhagvad Gita, A reverd Dharmic Scripture, offers valuable insights on social work and service to humanity. Here are some key points.

**1. Selfless Service (Nishkam Karma):** The Gita emphasizes performing actions without attachment to their consequences, doing good work for the greater good without expecting personal gain.

**2. Duty - Bound Action (Swadharma):** It encourages individuals to fulfill their duties and responsibilities, contributing to the well-being of society.

**3. Compassion and Empathy (Daya):** The Gita teaches the importance of cultivating compassion and empathy towards all beings, recognizing the divine in everyone.

**4. Detachment and objectivity (Vairagya):** It advises maintaining a balanced and detached attitude while engaging in social work, avoiding emotional attachment to outcomes.

**5. Working for the Greater Good (Lokahita):** The Gita emphasizes the importance of working for the benefit of all, considering the well being of the community and the world.

These teachings inspire us to engage in social work with a selfless attitude, contributing to the betterment of society and the world.

**Collected by: Rtn. N.G. Usha**

## ಸದಸ್ಯರ ಗಮನಕ್ಕೆ

ದಿನಾಂಕ: 14.10.2024 ರಂದು ನಡೆದ ನಮ್ಮ ರೋಟರಿಯ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಕ್ಲಬ್‌ನ ಬುಲೆಟಿನ್ "ವಿಶ್ವಮಿತ್ರ" ದ ವೆಚ್ಚವು ಅಧಿಕವಾಗುತ್ತಿರುವುದರ ಬಗ್ಗೆ ಚರ್ಚಿಸಲಾಗಿ, ನವೆಂಬರ್ 1, 2024 ರಿಂದ ಹಾರ್ಡ್ ಕಾಪಿ ಬೇಕಾದವರಿಗೆ ಮಾತ್ರ ಟಪಾಲು ಮುಖಾಂತರ "ವಿಶ್ವಮಿತ್ರ" ಪತ್ರಿಕೆ ಕಳುಹಿಸಲಾಗುವುದು. ಉಳಿದವರಿಗೆ ಸಾಫ್ಟ್ ಕಾಪಿಯನ್ನು ಕ್ಲಬ್‌ನ ವಾಟ್ಸಪ್ ಗ್ರೂಪ್‌ನಲ್ಲಿ ಕಳುಹಿಸಬಹುದೆಂದು ತೀರ್ಮಾನಿಸಲಾಗಿದೆ.

ಹಾರ್ಡ್ ಕಾಪಿ ಬೇಡ ಎನ್ನುವ ಸದಸ್ಯರು ದಿನಾಂಕ: 25.10.2024 ರೊಳಗಾಗಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಿಗೆ ತಿಳಿಸಬೇಕಾಗಿ ವಿನಂತಿ.

**ರೊ. ಕೆ. ಸೂರ್ಯನಾರಾಯಣ ಉಡುಪ, ಅಧ್ಯಕ್ಷರು**



## ಸಂಪಾದಕೀಯ

### ಸಿಟ್ಟಿನ ಕೈಗೆ ಸಿಕ್ಕಿಬಿದ್ದ ಮನಸ್ಸು

**'ತನಗೆ ಮುನಿದವರಿಗೆ ತಾ ಮುನಿಯಲೇಕಯ್ಯಾ, ತನಗಾದ ಆಗೇನು? ಅವರಿಗಾದ ಚೇಗೇನು? ತನುವಿನ ಕೋಪ ತನ್ನ ಹಿರಿತನದ ಕೇಡು, ಮನದ ಕೋಪ ತನ್ನ ಅರಿವಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ, ನೆರೆಮನೆಯ ಸುಡದು ಕೂಡಲಸಂಗಮದೇವಾ'** ಎಂದು ಬಸವಣ್ಣನವರು ಕೋಪದ ಸ್ವರೂಪದ ಬಗ್ಗೆ ಹೇಳಿದ್ದಾರೆ.

ನನ್ನ ಕಂಡು ಸಿಟ್ಟಾಗುವವರ ಮೇಲೆ ತಿಳುವಳಿಕೆ ಇರುವ ನಾನೇಕೆ ಕನಲಬೇಕು. ಅದರಿಂದ ನನಗಾಗುವ ಒಳಿತೂ ಇಲ್ಲ. ನಾ ಮುನಿದವರಿಗೆ ಆಗುವ ತೊಂದರೆಯೂ ಇಲ್ಲ. ದೇಹದ ಮೂಲಕ ವ್ಯಕ್ತವಾಗುವ ಕೋಪವು ಸಮಾಜದಲ್ಲಿ ನನಗಿರುವ ಮಹತ್ವ, ಗೌರವ, ದೊಡ್ಡತನಗಳನ್ನು ನಾಶ ಮಾಡುತ್ತದೆ. ಯಾರಿಗೂ ಕಾಣದಂತೆ ಮನದಲ್ಲೇ ಕೋಪವನ್ನು ಮುಚ್ಚಿಟ್ಟುಕೊಂಡರೆ ಅದು ನನ್ನ ತಿಳುವಳಿಕೆ, ಬುದ್ಧಿಶಕ್ತಿ ಮತ್ತು ಮನಃಸ್ಥಿತಿಯನ್ನೇ ಕೊಲ್ಲುತ್ತದೆ.

ಕೋಪದ ಜೊತೆ ಹುಟ್ಟುವ ಜಗಳ, ಬೈಗುಳ, ದ್ವೇಷ, ಹೊಡೆದು ಕೊಲ್ಲುವ ಆಲೋಚನೆಗಳು ಕೂಡ ಒಳಿತನ್ನು ತರುವಂತದ್ದಲ್ಲ. ಇಷ್ಟೆಲ್ಲಾ ಗೊತ್ತಿದ್ದರೂ ಮನುಷ್ಯರು ಕೋಪದ ಪಾಶದೊಳಗೆ ಸಿಕ್ಕಿ ಬೀಳುತ್ತಾರೆ. ಸಹಜವಾಗಿ ಅತಿ ಕೋಪಿಷ್ಠರು ಆತ್ಮೀಯರ ಸಲಹೆಗಳನ್ನು ತಡವಾಗಿ ಸ್ವೀಕರಿಸುತ್ತಾರೆ. ಒಳ್ಳೆಯ ವ್ಯಕ್ತಿಯೊಂದಿಗೆ ಇದ್ದರೆ ನಮ್ಮ ಕೋಪವು ಬೇಗನೆ ಸಾಯುತ್ತದೆ ಎನ್ನುತ್ತಾರೆ. ಆದರೆ ಅಂತಹ ಒಳ್ಳೆಯವರು ಈಗೆಲ್ಲಿ ಸಿಗುತ್ತಾರೆ?

ಕೋಪಿಷ್ಟರ ಮಾತಷ್ಟೇ ಒರಟು, ಮನಸ್ಸು ಬಲು ಮೃದು ಎನ್ನುತ್ತಾರೆ ಕೆಲವರು. ಇದನ್ನು ಪೂರಾ ಒಪ್ಪುವುದು ಕೂಡ ಕಷ್ಟ. ಕೋಪದಿಂದ ಉಂಟಾಗುವ ನಷ್ಟಗಳು ಹಲವಾರು. ಇದರಿಂದ ನೀವು ನಿಮ್ಮ ಸುಂದರ ಬಾಂಧವ್ಯಗಳನ್ನು ಕಳೆದುಕೊಳ್ಳಬಹುದು. ಅತಿಯಾದ ಕೋಪ ನಿಮ್ಮ ಆರೋಗ್ಯವನ್ನು ಕೂಡ ತಿಂದುಹಾಕುತ್ತದೆ. ಕೋಪದಿಂದ ದೇಹ, ಮನಸ್ಸಿಗಾಗುವ ದುಷ್ಪರಿಣಾಮಗಳು ಅನೇಕ. ಕೋಪ ಬರುವುದು ಒಂದು ನೈಸರ್ಗಿಕವಾದ ಪ್ರಕ್ರಿಯೆ. ಕೋಪ ಬಂದಾಗ ದೇಹದ ಒಳಗಿಟ್ಟುಕೊಂಡು ಕೊರಗುವುದಕ್ಕಿಂತ ಅದನ್ನು ಹೊರಕ್ಕೆ ಎಳೆದು ಹಾಕುವುದು ಒಳ್ಳೆಯದು ಎಂದು ಹಲವರು ಹೇಳುತ್ತಾರೆ. ಇದರ ಬದಲಿಗೆ ಕೋಪವೇ ಬರದಂತೆ ಅಭ್ಯಾಸ ಮಾಡಿಕೊಳ್ಳುವುದು ಇನ್ನೂ ಉತ್ತಮ. ವಿಷಯಗಳು ನಾವು ಅಂದುಕೊಂಡಂತೆ ಆಗದಿದ್ದಾಗ ಪ್ರತಿಯೊಬ್ಬರಿಗೂ ಕೋಪ ಬಂದೇ ಬರುತ್ತದೆ. ಹೀಗಾಗಿ 'ಹೀಗೆಯೇ ಆಗಬೇಕು' ಎಂದು ಹಠ ಹಿಡಿಯುವುದನ್ನು ಬಿಟ್ಟೇ ಬಿಡುವುದು ವಾಸಿ. ಕೋಪಿಸುವುದರಲ್ಲಿ ನಿಧಾನಿಯಾದವನು ತನ್ನ ದೊಡ್ಡತನದ ಕೇಡನ್ನು ತಿಳುವಳಿಕೆಯ ಹದವನ್ನು ಎಂದೆಂದೂ ಕೆಡಿಸಿಕೊಳ್ಳುವುದಿಲ್ಲ. ಆದ್ದರಿಂದ ನಾವು ಕೋಪದ ಕೈಗೆ ನಮ್ಮ ಬುದ್ಧಿ ಕೊಡದೇ ವಿವೇಚನೆಯಿಂದ ವರ್ತಿಸೋಣ.

• **ರೊ. ಎಂ. ಮಾಧವಾಚಾರ್**

## DISTRICT CULTURAL MEET

** District Level, 10-11-2024, Kundapura*
** Zonal Level, 27-10-2024, Shikaripura*

| | |
|---|---|
| 1) Bhakthigeethe | 5min |
| 2) Film Song (Solo) | 5min |
| 3) Duet Song | 5min |
| 4) Group Dance (Film or Folk) | 5min |
| 5) Mono Acting | 5min |
| 6) Group Song | 5min |
| 7) Dance (Solo) (Annet or John) | 5min |
| 8) Skit | 14 Min |

**ವಿವರಗಳಿಗೆ : ರೊ. ಎಂ.ಎನ್.ಎಸ್. ಮಣಿ– 9844470999**


## ಜನ್ಮ ದಿನದ ಶುಭಾಶಯಗಳು



Mani M.N.S
25th Oct.







T.K.M. Bhatt
28th Oct.

### ನೂತನ ಸದಸ್ಯರ ಪರಿಚಯ...



Name: **Rtn. H.N. Yuvaraj**
Spouse Name: **Ragini Yuvaraj**
Profession: **Agriculturist**
Children Name: **H.Y. Abhinandan**
Birthday Date : **12th May**
Wedding Anniversary: **12th June**
Mob.No.: 94497 94644
Proposed by : Rtn. N.V. Bhat

### ಚಿಂತನ

**ನಾನು ಎಂಬುದ ಮರೆತು**
**ನನ್ನಿಂದಲೇ ಎಂಬುದ ತೊರೆದು**
**ನಾವು ಎಂಬುದ ನೆನೆದು**
**ನಮ್ಮಿಂದ ಎಂಬುದ ತಿಳಿದು**
**ಎಲ್ಲರೊಳಗೊಂದಾಗಿ ಬದುಕಿದರೆ ಅವರೇ**
**ನಿಜವಾದ ಸಾಧಕರು, ಅದುವೆ ಬದುಕಿನ ಸಾಧನೆ**

**– ರೊ. ಕೆ. ಸೂರ್ಯನಾರಾಯಣ ಉಡುಪ**

### ಆತ್ಮೀಯ ರೋಟರಿ ಮಿತ್ರರೇ ನಿಮ್ಮ ಗಮನಕ್ಕೆ
### ಇದು ರೋಟರಿ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಭಾಗವಹಿಸಲು ಕರೆ

2025 ಜೂನ್ 21 ರಿಂದ 25 ರವರೆಗೆ ಕೆನಡಾದ ಕ್ಯಾಲ್ಗರಿಯಲ್ಲಿ ಅಂತರಾಷ್ಟ್ರೀಯ ರೋಟರಿ ಸಮ್ಮೇಳನ ಜರುಗಲಿದೆ, ಇದರ ಬಗ್ಗೆ ಈಗಾಗಲೇ ಎಲ್ಲಾ ಮಾಹಿತಿಗಳನ್ನು ತಮಗೆ ತಿಳಿಸಿದ್ದು ಇದೇ ತಿಂಗಳು 15–10–24 ರ ಒಳಗೆ ಇದರ ಬಗ್ಗೆ ವ್ಯವಸ್ಥೆ ಮಾಡಲು ಅಂದರೆ ಪ್ರಯಾಣ ಮತ್ತು ಏರ್ ಟಿಕೆಟ್ ವೀಸಾ ಮುಂಗಡ ಕಾದಿರಿಸುವ ಬಗ್ಗೆ ತಮ್ಮ ಬರುವಿಕೆಯ ಹೆಸರುಗಳನ್ನು ಕೂಡಲೇ ತಿಳಿಸಲು ಮನವಿ ಮಾಡಿದ್ದೇವೆ. ದಯವಿಟ್ಟು ಆಸಕ್ತರು ಹೆಸರುಗಳನ್ನು ಕೂಡಲೇ ತಿಳಿಸಿ ಪಾಸ್ಪೋರ್ಟ್ ಕಾಪಿಯನ್ನು ನಮಗೆ ಕೂಡಲೇ ಕಳುಹಿಸಲು ಮತ್ತೊಮ್ಮೆ ಮನವಿ ಮಾಡುತ್ತಿದ್ದೇವೆ.

ಮೇಲ್ಕಂಡ ಸಮ್ಮೇಳನದ ವಿಷಯಕ್ಕೆ ಸಂಬಂಧಿಸಿದಂತೆ ಆಸಕ್ತ ರೊಟೇರಿಯನ್ಸ್‌ಗಳು 31–10–2024ರ ಒಳಗೆ ತಮ್ಮ ಹೆಸರನ್ನು ಮತ್ತು ಪಾಸ್‌ಪೋರ್ಟ್ ಕಾಪಿಯನ್ನು ಕೊಡಲು ಮನವಿ.

**– ರೊ. ಎ.ಎಸ್. ಗುರುರಾಜ್**
**ಆರ್. ಐ. ಕನ್ವೆನ್ಷನ್ ಸಂಚಾಲಕರು, ಶಿವಮೊಗ್ಗ**
**ಮೊ. 94483 19976**

To,

*Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495